ಅಜೇಯ



# ಮನೆಮದ್ದು- ಅದರ ಪರಿಧಿ...

ಕರೆಯದೇ ಬಂದ ಅತಿಥಿ

ಆಯುರ್ವೇದ ದೃಷ್ಟಿಕೋನದಲ್ಲಿ...



ಡಾ. ಚಿತ್ರಲೇಖಾ ವಿ.ಕೃಷ್ಣ
ಆಯುರ್ವೇದ ವೈದ್ಯೆ,
ಶ್ರೀಸದ್ಗುರು ಚಿಕಿತ್ಸಾಲಯ, ಶಿವಮೊಗ್ಗ

ಸಾಮಾನ್ಯರಿಂ ಆಯುರ್ವೇದ ಎಂದರೆತಮಗೆಅದುಕರಗತವೇ ಎಂಬ ರೀತಿಯ ಪ್ರತಿಕ್ರಿಯೆ ನೀಡುವುದನ್ನು ನೋಡಿ ಬಹಳ ಅಚ್ಚರಿ ಆಗುತ್ತದೆ. ಇನ್ನೂ ಕೆಲವರು 8 ವರ್ಷಗಳ ಶ್ರಮ ವಹಿಸಿ ಓದಿರುವ ವೈದ್ಯರಿಗೆ ಅವರ ಕೊಠಡಿಯಲ್ಲೇ ಮನೆಮದ್ದಿನ ಪಾಠ ಮಾಡುವುದೂ ಉಂಟು. ಬಹುಶಃ ಇದು ನಮ್ಮ ಭಾರತಿಯ ಸಂಪ್ರದಾಯದಲ್ಲಿ ಇರುವ ಕಾರಣದಿಂದಿರಬಹುದು. ಆದರೆ ಆಯುರ್ವೇದದ ವ್ಯಾಪ್ತಿ ಅಪಾರ. ಅದರ ಆಳ ಸಂಪೂರ್ಣವಿರಲಿ ಅರ್ಧದಷ್ಟು ಅರಿತ ಮನುಷ್ಯರಿಲ್ಲ. ಇನ್ನು ಮನೆಮದ್ದು ಅಂದರೆ ಆಯುರ್ವೇದ ಅನ್ನುವವರಿಗೆ ಏನು ಹೇಳಬೇಕು?

ಇಡೀ ಭೂಮಂಡಲಕ್ಕೆ ಒಬ್ಬ ಮನುಷ್ಯ ಎಷ್ಟೋ ಅಷ್ಟು; ಒಂದು ಆಳೆತ್ತರದ ಹುತ್ತ ಆಯುರ್ವೇದ ವಾದರೆ, ಮನೆಮದ್ದು ಒಂದು ಇರುವೆಯಷ್ಟು. ಅದು ಪ್ರಾಥಮಿಕ ಚಿಕಿತ್ಸೆ ಎಂದು ಪರಿಗಣಿಸಬಹುದೇ ಹೊರತು ಸಂಪೂರ್ಣ ಚಿಕಿತ್ಸೆಯಾಗುವುದಿಲ್ಲ. ಸಮಸ್ಯೆ ಅಲ್ಪ ಪ್ರಮಾಣದ್ದಾರೆ ಬಗೆ ಹರೆಯುವುದು. ಇನ್ನು ಜಟಿಲ ತೊಂದರೆಗಳಲ್ಲಿ ಔಷಧಕ್ಕೆ ಸಹಕಾರಿ ಪಥ್ಯವಾಗಿರುತ್ತದೆ.

ಯಾವುದೇ ವಿಷಯ ವಾದರೂ ಅದಕ್ಕೆ ಕನಿಷ್ಟ ಎರಡು ದೃಷ್ಟಿಕೋನ ಗಳಿರುತ್ತವೆ. ಅಂತೆಯೆ ಮನೆಮದ್ದುಗಳಿಂದ ಅನುಕೂಲ ಹಾಗು ದುಷ್ಪರಿಣಾಮ ಎರಡೂ ಇರುವುದು.

**ಲಾಭ/ಅನುಕೂಲಗಳು:**

ಅವು ಪ್ರಾಕೃತಿಕ ಖಾದ್ಯ ದ್ರವ್ಯಗಳಾಗಿರುತ್ತವೆ. ಜೇಬಿಗೆ ಹೊರೆ ಆಗಲಾರದು, ಮನೆಯಲ್ಲೇ ಅಥವಾ ಸುಲಭವಾಗಿ ಸಿಗುವುದು. ಮನೆಯಲ್ಲಿ ಹಿಂದಿನಿಂದಲು ಅಭ್ಯಾಸದಿಂದ ಬಂದಿರುವುದರಿಂದ ನಂಬಿಕೆ ಜಾಸ್ತಿ. ವೈದ್ಯರನ್ನು ಕಾಣುವ ಕ್ಯೂ ತಪ್ಪುತ್ತದೆ. ನೂರಾಎಂಟು ತರಹದ ಮಾತ್ರೆಗಳನ್ನು ನುಂಗುವುದು ತಪ್ಪುವುದು. ಮನೆಮದ್ದಿಗೆ ತಿಳಿಸಿರುವ ವಿಧಾನದಿಂದತಯಾರಿಸಿದ ಔಷಧರುಚಿಯಿಲ್ಲವಾದಲ್ಲಿ,ರುಚಿ ಹೆಚ್ಚಿಸುವಂತೆ ಹಾಲು/ಸಕ್ಕರೆ/ಬೆಲ್ಲ/ ಜೇನುತುಪ್ಪವನ್ನು ಬಳಸಿ ಉಪಯೋಗಿಸಬಹುದು. ಅವು ಕೆಲಸ ಮಾಡಲಿಲ್ಲವಾದಲ್ಲಿ ಆಯುರ್ವೇದವನ್ನೇ ದೂಷಿಸಬಹುದು.